# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಪಿಡಬ್ಲ್ಯೂ: 23
ಸಿಡಬ್ಲ್ಯೂ: 06

**ದಿನಾಂಕ: 02-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಸಾದತ್ ಬೇಗ್ |
| ತಂದೆಯ ಹೆಸರು | : ಅಸ್ಲಾಂ ಬೇಗ್ |
| ವಯಸ್ಸು | : 31 ವರ್ಷ |
| ಉದ್ಯೋಗ | : ಗ್ಯಾರೇಜ್ |
| ವಾಸ ಸ್ಥಳ | : ಚಿತ್ರದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ನನಗೆ ಆರೋಪಿತನ ಗುರುತು ಇಲ್ಲ. ಈ ದಿನ ನ್ಯಾಯಾಲಯಕ್ಕೆ ಬಂದಿರುವ ಚಾಸಾ–**7** / ವಿಕಾಸ್ ಗೊತ್ತು. ನನ್ನ ಮತ್ತು ಆತನ ಸಹಿಗಳನ್ನು ಪೊಲೀಸರು ಪಡೆದಿದ್ದಾರೆ. ಯಾವ ಕಾರಣಕ್ಕಾಗಿ ನಮ್ಮ ಸಹಿಗಳನ್ನು ಪಡೆಯಲಾಯಿತು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಚಿತ್ರದುರ್ಗದ ಮಠದ ಕೆರೆಯ ಬಳಿ ನಮ್ಮನ್ನು ನಿಲ್ಲಿಸಿಕೊಂಡು ಪೋಟೋ ತೆಗೆಸಿದರು. ಈಗ ನನಗೆ ತೋರಿಸಿದ ದಿನಾಂಕ **09–01–2022** ರ ಮಹಜರಿನ ಮೇಲೆ ನನ್ನ ಸಹಿ ಇದ್ದು ಸದರಿ ಮಹಜರನ್ನು ನಿಪಿ–**44** ಎಂದು ನನ್ನ ಸಹಿಯನ್ನು ನಿಪಿ–**44**(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ–**36** ರಿಂದ **41** ಪೊಟೋಗಳಲ್ಲಿ ನಾನು ಮತ್ತು ಸದರಿ ವಿಕಾಸ್ ಇದ್ದು ಸದರಿ ಪೊಟೋಗಳನ್ನು ಚಿತ್ರದುರ್ಗದ ಮಠದ ಮುಂದೆ ತೆಗೆಯಲಾಗಿದೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

**2.** ದಿನಾಂಕ **09–01–2022** ರಂದು ಪೊಲೀಸರು ನನ್ನನ್ನು ಹಾಗೂ ವಿಕಾಸನನ್ನು ಠಾಣೆಗೆ ಕರೆಸಿದ್ದರು ಅಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿ ಇದ್ದ ಮತ್ತು ಪೊಲೀಸರು ಆತನನ್ನು ತೋರಿಸಿ ಆತ ತನ್ನ ಹೆಂಡತಿಯನ್ನು ಕೊಲೆ ಮಾಡಿದ್ದಾನೆಂದು ಹೇಳಿ ಆತ ತೋರಿಸಿ ಹಾಜರುಪಡಿಸಿರುವಂತಹ ವಸ್ತುಗಳನ್ನು ಅವರುಗಳು ಅಮಾನತ್ತುಪಡಿಸಿಕೊಳ್ಳುವುದಾಗಿ ಕಾರಣ ನಮ್ಮನ್ನು ಪಂಚರಾಗಬೇಕೆಂದು ಕೋರಿದ್ದು ಅದರಂತೆ ನಾವಿಬ್ಬರು ಒಪ್ಪಿದ್ದು ಮತ್ತು ತದ ನಂತರ ಆರೋಪಿ ನಮ್ಮನ್ನು ಹಾಗೂ ಪೊಲೀಸರನ್ನು ಚಿತ್ರದುರ್ಗದ ಮುರುಘಾ ಮಠದ ಮುಂದೆ ಇರುವಂತಹ ಕೆರೆಯ ಬಳಿ ಕರೆದುಕೊಂಡು ಹೋಗಿ ತಾನು ಕೊಲೆ ಮಾಡುವ ಕಾಲಕ್ಕೆ ಹಾಕಿಕೊಂಡಂತಹ ರಕ್ತ ಹತ್ತಿದ ಬಟ್ಟೆಗಳು ಅಂದರೆ ಒಂದು ಅಂಗಿ ಹಾಗೂ ಒಂದು ಲುಂಗಿ ಇವುಗಳನ್ನು ಆತ ಎತ್ತಿ ಕೊಟ್ಟು ಹಾಜರುಪಡಿಸಿದ್ದರ ಮೇರೆಗೆ ಅವುಗಳನ್ನು

ಅಮಾನತ್ತುಪಡಿಸಿಕೊಂಡು ನಿಪಿ–**44** ರಂತೆ ಮಹಜರ್ ಕ್ರಮ ಜರುಗಿಸಿದರು ಎಂದರೆ ಬಟ್ಟೆ ತೆಗೆದುಕೊಡುವ ಕಾಲಕ್ಕೆ ಅಲ್ಲೆ ಇದ್ದೆವು ಮತ್ತು ಸಹಿಯನ್ನು ಅಲ್ಲಿಯೇ ಮಾಡಿದ್ದೇವೆ. ಆಗಲೇ ನಿಪಿ–**36** ರಿಂದ **41** ಫೋಟೋಗಳನ್ನು ತೆಗೆಯಲಾಯಿತು ಮತ್ತು ಅದರಲ್ಲಿ ಆರೋಪಿ ಕೂಡಾ ಇದ್ದಾನೆಎಂದರೆ ಮಾಸ್ಕ್ ಹಾಕಿಕೊಂಡಿದ್ದರು ಗೊತ್ತಾಗಲಿಲ್ಲ. ಆ ದಿನ ಆರೋಪಿ ಸ್ವತಃ ಆ ಬಟ್ಟೆಗಳನ್ನು ನಮ್ಮ ಸಮಕ್ಷಮ ಎತ್ತಿಕೊಟ್ಟಿದ್ದಾಗ್ಯೂ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀಮತಿ ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**

**3.** ಮಹಜರಿಗೆ ಬರಬೇಕು ಎಂದು ಹೇಳಿ ಪೊಲೀಸರು ನನಗೆ ಲಿಖಿತ ನೋಟೀಸನ್ನು ಕೊಟ್ಟಿರಲಿಲ್ಲ. ಆ ದಿನ ಪೊಲೀಸರು ನಮಗೆ ತಮ್ಮ ಜೀಪಿನಲ್ಲೆ ಬರಲು ಹೇಳಿದರು, ಆದರೆ ನಾನು ಮತ್ತು ವಿಕಾಸ್ ನಮ್ಮ ಬೈಕಿನಲ್ಲಿ ಸ್ಥಳಕ್ಕೆ ಹೋದೆವು. ನಾವು ಹೋಗುವುದರೊಳಗಾಗಿ ಪೊಲೀಸರು ಆ ಸ್ಥಳ ತಲುಪಿದ್ದರು. ಆ ಸ್ಥಳದಲ್ಲಿ ಬಟ್ಟೆಗಳು ಹೇಗೆ ಬಂದವು ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಆ ರಸ್ತೆಯಲ್ಲಿ ಸಾಕಷ್ಟು ಸಂಖ್ಯೆಯ ವಾಹನಗಳು ಓಡಾಡುತ್ತವೆ ಎನ್ನುವುದು ನಿಜ. ಸದರಿ ಕೆರೆಗೆ ಲಗತ್ತಾಗಿ ಬಲಗಡೆಗೆ ಮನೆಗಳು ಇವೆ ಎನ್ನುವುದು ನಿಜ. ಆ ದಿನ ಮಾಸ್ಕ್ ಹಾಕಿದಂತಹ ವ್ಯಕ್ತಿ ಯಾರು ಎಂದು ನನಗೆ ಗೊತ್ತಾಗಲಿಲ್ಲ ಎನ್ನುವುದು ನಿಜ. ಆರೋಪಿತನನ್ನು ಈ ದಿನವೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎನ್ನುವುದು ನಿಜ. ಆ ಬಟ್ಟೆಗಳನ್ನು ಚೀಲದಲ್ಲಿ ಹಾಕಿ ಸೀಲು ಮಾಡಿರಲಿಲ್ಲ. ನಿಪಿ–**44** ರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮಹಜರ್ ಮೇಲೆ ನನ್ನ ಸಹಿಯನ್ನು ಡಿವೈ.ಎಸ್.ಪಿ. ಕಛೇರಿಯಲ್ಲಿ ಪಡೆಯಲಾಯಿತು ಎನ್ನುವುದು ನಿಜ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.